ಎಂಬನ್ನಿಸಿಕೆ. ಅವನು ಮಾತ್ರ ಇನ್ನೂ – ಆಕಾಶದಲ್ಲಿ ಹಾರುವ ಹಕ್ಕಿ. ಬಣ್ಣದ ಪತಂಗಗಳು ಅಲ್ಲೇ ಬೆಳೆದ ಹೂಗಳು ಎಂದುಕೊಂಡ ಮಗುವಿನ ಮುಗ್ಧತೆಯಲ್ಲಿ ನನ್ನತ್ತ ತಿರುಗಿ ನಿಂತೇ ಇದ್ದ.

ನನಗೆ ನಾ ಬರೆದ ನಾಕಾರು ಕಥೆಗಳ ಕಥಾನಾಯಕರ ನೆನಪು. ಈ ಅಪರಿಚಿತ, ಪರಿಚಿತವೆನ್ನುವ ನಗೆಯ ಅನಾಥಮಗು. ಕಣ್ಣಲ್ಲಿ ಖಾಲಿಕಂಗಳ ತುಂಬಿಕೊಂಡು ಬರುಹೋಗುವವರಿಗೆಲ್ಲ ಸೆರಗಿಡಿದು ಹಟಮಾಡಿ ಹಣದ ನೆವದಲ್ಲಿ ಪ್ರೀತಿ ಅರಸುವ ಮಗು, ಅನ್ನುವಂತೆ ಕಂಡ. ನನ್ನ ಕಥಾ ಪಾತ್ರಗಳು ಹಾಗೇ ಅಲ್ಲವೆ? ತುಂಬುಕೊಡದ ಪ್ರೀತಿಯ ತೆನೆಯಲ್ಲಿ ಬೆಳೆದ ನಾನೇಕೆ ಅಂಥ ಕಥೆ ಬರೆದೆ. ಬಹುಶಃ ಇಲ್ಲದಿರುವುದರ ಬಗೆಗಿನ ಒಲವು ಯಾವಾಗಲೂ ಹೆಚ್ಚು. ಎಂದೋ ಬರೆದ – ತೀವ್ರ ನೋವು; ತೀವ್ರ ವಿಷಾದ ತುಂಬಿದಂಥ ನನ್ನ ಅಸಹಾಯಕ ಕಥಾಪಾತ್ರಗಳು ಒಂದುದಿನ ನನ್ನೆದುರಿಗೇ ಹಠಾತ್ತಾಗಿ ಬಿಳಿಹಲ್ಲಿನ ನಗೆಹೊತ್ತು ನಿಲ್ಲಬಲ್ಲುವೆಂದು ಯಾರು ಅರಿತಿದ್ದರು? ಈಗದು ನಿಜವಾಗಿದೆಯೆಂದು ತಿಳಿದವರಾಗಿದ್ದರೂ! ನನ್ನದಲ್ಲದ ಈ ಊರಲ್ಲಿ ಅರಿವನ್ನೂ ಮೀರಿ ತ್ರಿವಿಕ್ರಮನಾಗಿ ನಿಂತಿದ್ದ ಬದುಕು ನೀಡಿದ ಅಪರಿಚಿತ. ಈವರೆಗೂ ನನಗೆ ದಕ್ಕಿದ್ದೆಲ್ಲ ಬಾಲ್ಯದ ಹೊರತಾಗಿ ಬರಿಯ ನೋವು. ಚಣಕ್ಕೊಮ್ಮೆ ವೇದನೆಯ ಛಳಕು ಹುಟ್ಟಿಸುವ ಈ ಬೇಗೆಯನ್ನೇ ಕಡೆಗಾಣಿಸಲು ಯಾರಿಗೂ ಮುಖತೋರಿಸದೆ ಪರಿಚಯ, ಗುರುತು, ವಿಳಾಸ ಎಲ್ಲ ಭಸ್ಮ ಮಾಡಿ ಇಲ್ಲಿಗೆ ಸಾಯಲು ಬಂದಿದ್ದೆನಲ್ಲ! ಇಂಥ ನಿರ್ಧಾರಕ್ಕೆ ನಾನು ಹೊಣೆಗಾರಳಲ್ಲದಿದ್ದರೂ, ನನಗೆ ನೀಡಿದ ನೋವಿಗೆ ನಾನು ಬರಿಯ ನಿಮಿತ್ತವಾಗಿದ್ದರೂ! ಆದರೆ ಈಗ? ಯಾರೋ, ಯಾವ ಹುಟ್ಟೋ? ಏನೆಂದೂ ತಿಳಿಯದವನು ಬದುಕುವಂತೆ ಮೌನವಾಗಿ ಪ್ರೇರೇಪಿಸುತ್ತ, ನೋವಿನ ಶಮನ ನಾನೆಂಬಂತೆ ಎದುರಿಗೇ ಇದ್ದಾನೆ. ಏನು ಮಾತಾಡಲಿ ಅವನೊಂದಿಗೆ? ನೆನ್ನೆಗೇ ಮಾತೆಲ್ಲ ಕರಗಿಹೋಗಿ, ಮೌನದ ಕಹಿಯನ್ನಷ್ಟೇ ಇಂದಿನ ತುಟಿಗಳಿಗೆ ಉಳಿಸಿಕೊಂಡ ಹತಭಾಗ್ಯೆ ನಾನು.

ರಸ್ತೆ ಖಾಲಿಯಾಯಿತು. ವಾಹನಗಳ ಕರ್ಕಶದನಿ. ಗಜಿಬಿಜಿ ಎಲ್ಲ ಮಸುಕಾದವು. ತುಂಬಿದ ನಿಶ್ಯಬ್ದದಲ್ಲಿ ಮತ್ತೊಮ್ಮೆ ನನ್ನ ಕಂಗಳಲ್ಲಿ ಸುನಯನಾ ನದಿದಂಡೆ – ಬೆಳ್ಳಕ್ಕಿಗಳು ಅಲ್ಲಿ. ನಾನು ತುಟಿತೆರೆದು ಮಾತಿಗೆ ತಡಕಾಡಿದೆ.

★★★

ಅವನ ಭೇಟಿಯ ನೆನಪಿಗೆ ಎಷ್ಟೊಂದು ಮಧುರತೆಯ ಲೇಪನ!

ಜೀವನದ ಎಷ್ಟೋ ಸಾಮಾನ್ಯ ಗಳಿಗೆಗಳಲ್ಲಿ ಸಾಮಾನ್ಯವಾಗಿ ಸೇರಿಹೋಗಬಹುದಾಗಿದ್ದ ಆತನ ಭೇಟಿ. ಏಕೆ ಹಾಗಾಗಲಿಲ್ಲ? ಒಳ್ಳೆಯದಾಯಿತು. ಸಾವಿನ ಕತ್ತಲೆಯ ಖೋಲಿಯಲ್ಲಿ ಒಂದು ಬೆಳಕಿನ ಎಳೆಕಂಡು ಜೀವಕ್ಕೆ ಪ್ರೇರಣೆಯಾಯಿತು. ಇಲ್ಲಿಯವರೆಗೆ ಈ ಜಗತ್ತಿಗೆ ತಿರಸ್ಕಾರ ಹತಾಶೆ ತುಂಬಿದ ನಿಟ್ಟುಸಿರಷ್ಟೇ ನೀಡಲು ಸಾಧ್ಯವಾಗಿದ್ದ ನನ್ನಿಂದಲೂ ಆತ ಪ್ರೀತಿಯ ಧಾರೆ ಹರಿಸಿದ; ಚೈತ್ರದುಲ್ಲಾಸವ ತಂದ. ಈ ಸಾಮಾನ್ಯ–ಅಸಾಮಾನ್ಯನಾದ ನನಗೆ. ಓ! ಅನಾಮಿಕ, ನಿನಗೆ ಹುಟ್ಟುಕೊಟ್ಟವರು ಬಹುಕಾಲ ಬಾಳಲಿ. ಮಾಗಿಯ ಹಳದಿಯೆಲೆಯುದುರಿ ಕಾಂಡದ ಕೈಗಳು ಬರಿದೋ ಬರಿದಾಗಿ ನಿಂತಿದ್ದ ಒಣಗಿದೊಂಟಿ ಮರಕ್ಕೆ ಕಾಲಮಾಗಿ ಮತ್ತೆ ಸುಗ್ಗಿಯ ಜೀವಕಳೆ ಬರುತ್ತದೆ. ಆ ಚೈತ್ರ ಚೈತನ್ಯದ ಕಾಲದಲ್ಲಿ ಎಳೆ ಚಿಗುರು ಗೊಂಚಲು ಹೊಂಬಣ್ಣಕ್ಕೆ ತಿರುಗಿ, ಹೂವಾಗಿ ಹೂತು. ಎಲೆಯಾಗಿ ಮಾಗಿ, ಹಣ್ಣಾಗಿ ಮಾತು ಇಪ್ಪತ್ತೇಳನೆಯ ದಿನಕ್ಕೆ ಹೊಸಯುಗಕ್ಕೆ ಆದಿಯ ಸಂಭ್ರಮ ತರುತ್ತದೆ – ನಾನಂದು ಮತ್ತೆ ನವೀನಜನ್ಮ ಪಡೆಯುತ್ತೇನೆ. ಅವನ ಹೆಸರೇನೆಂದು ಕೇಳಬೇಕೆಂಬಾಸೆ ಮನದಲ್ಲಿ ಮೂಡಿದರೂ ಅದುಮಿದೆ. ನನ್ನ ಬದುಕಿಗೆ ಸುಗ್ಗಿಯ ಹಿಗ್ಗುತಂದ ಚೈತ್ರನವ. ಅವನನ್ನು ಹಾಗೆಯೇ ಕರೆಯುವೆ – ಇಗೋ! ನೀನು ಚೈತ್ರ.